O.S.No.150/2018
PW -1

ದಿನಾಂಕ 25/01/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**<u>ಪಾಟೀ ಸವಾಲು :- ಶ್ರೀ ಬಿ.ಬಿ.ಎಂ. ಪ್ರತಿವಾದಿ ಪರ ವಕೀಲರಿಂದ</u>**

ದಾವಾ ಆಸ್ತಿಯು ಮೂಲತಃ ಯಾವ ಸರ್ವೆ ನಂಬರ್ ಗೆ ಸೇರಿದ್ದು , ಯಾವಾಗ ಭೂ ಪರಿವರ್ತನೆ ಆಗಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾವು ನಿವೇಶನ ಕೊಂಡುಕೊಳ್ಳುವ ಕಾಲಕ್ಕೆ ನಿವೇಶನ ಅಳತೆ ಮತ್ತು ನಕಾಶೆಯನ್ನು ನೋಡಿ ಖರೀದಿಸಿರುತ್ತೇವೆ. ಲೇಔಟ್ ಪ್ಲಾನ್‌ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ಕೊಟ್ಟು ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ಈ ದಾವೆಯನ್ನು ಚಿಕ್ಕರಂಗನಾಯ್ಕ ಮತ್ತು ರಂಗನಾಯ್ಕ ಇವರ ವಿರುದ್ಧ ಹೂಡಿರುತ್ತೇನೆ. ಸರ್ವೆ ನಂ-12/1 ಎ 3 ರಲ್ಲಿ ಪ್ರತಿವಾದಿಯರಿಗೆ 7 ಗುಂಟೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯಲ್ಲಿ ಪ್ರತಿವಾದಿಗಳು ಅನುಭವಿಸಿಕೊಂಡು ಇರುತ್ತಾರೆ ಎಂದರೆ ಸರಿಯಲ್ಲ. ನಾನೇ ಪ್ರತಿವಾದಿಯರ ಸ್ವಾಧೀನಕ್ಕೆ ತೊಂದರೆ ಕೊಡುತ್ತಾ ಇರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು 2 ನಿವೇಶನಗಳಿಗೆ ಹಾಕಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು , ಸಮಯ ನೀಡಲಾಯಿತು.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ